**ಓ.ಎಸ್. ನಂ. 239/2018**

**ಪಿ.ಡಬ್ಲ್ಯು: 03 (Peddamallayya)**

**<u>ದಿನಾಂಕ:-29.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಪ್ರತಿವಾದಿ ಪರ – ಶ್ರೀ.T.M.S ವಕೀಲರಿಂದ.</u>**

ದಾಸರ ಓಬಯ್ಯ ರವರು ತಿಪ್ಪೆರುದ್ರಪ್ಪರವರ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತಾರೆ.ಸರ್ವೆ ನಂಬರ್ 154ಬಿ ಪೈಕಿ 4 ಎಕರೆಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ಅದು ನಮ್ಮ ಆಸ್ತಿ ಎಂದು ದಾವೆಯನ್ನು ಸಲ್ಲಿಸಿರುತ್ತಾರೆ.ಸರ್ವೆ ನಂಬರ್ 154ಬಿ ಒಟ್ಟು 13.64 ಎಕರೆ ಇದೆ ಎಂದರೆ ಹೌದು. ದಾವ ಜಮೀನಿನ ಅಕ್ಕ-ಪಕ್ಕ ನನ್ನ ಜಮೀನುಗಳಿಲ್ಲ.ದಾವ ಜಮೀನನ್ನು ನಾನು ನೋಡದೆ ಎಷ್ಟು ವರ್ಷ ಆಗಿದೆ ಎಂದರೆ ನಾನು ಸದಾ ನೋಡುತ್ತಿದ್ದೇನೆ. ಇದು ಮೂಲತಃ ಸರಕಾರಿ ಜಮೀನು ಎಂದರೆ ಹೌದು.

ದೊಡ್ಡ ಬೋರಯ್ಯ ಈ ಸರ್ವೆ ನಂಬರ್ ನಲ್ಲಿ ಒಟ್ಟು 3.64 ಎಕರೆ, ಸಣ್ಣ ಬೋರಯ್ಯ 4.14 ಎಕರೆ, ದಾಸರ ಓಬಯ್ಯ ಅಂದರೆ ಪ್ರತಿವಾದಿ 3.00 ಎಕರೆ ಮತ್ತು ಬೋಸಮ್ಮ 3.00 ಎಕರೆ ಜಮೀನು ಅನ್ನು ಉಳುಮೆ ಮಾಡುತ್ತಿದ್ದಾರೆ ಎಂದರೆ ನಾನು ನೋಡಿಲ್ಲ. ಅವರು ಪಟ್ಟ ಕೇಳಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸಲ್ಲಿಸಿರಬಹುದು. ಅದು ಈಗಲೂ ವಿಚಾರಣೆ ಮಾಡುತ್ತಿದ್ದಾರೆ ಎಂದರೆ ಇರಬಹುದು.

ಈ ದಾವ ಜಮೀನಲ್ಲಿ ಪ್ರತಿವಾದಿ ತಮ್ಮ ಸಣ್ಣ ಬೋರಯ್ಯರವರು 4.14 ಎಕರೆಯಲ್ಲಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ನಾನು ನೋಡಿಲ್ಲ, ಇವತ್ತಿಗೂ ಸಣ್ಣ ಬೋರಯ್ಯನ ಸ್ವಾಧೀನದಲ್ಲಿ ಇದೆ ಎಂದರೆ ನಾನು ನೋಡಿಲ್ಲ. ಅದರಲ್ಲಿ ಅವರು ಕುರಿಶೆಡ್ ಹಾಕಿದ್ದಾರೆ ಎಂದರೆ ಜಮೀನಿನಲ್ಲಿ ಇಲ್ಲ. ಚಿನ್ನೊಬನಹಳ್ಳಿ ಯಿಂದ ಕಂಪಳದೇವರಹಟ್ಟಿಗೆ ಹೋಗುವ ರಸ್ತೆಯಲ್ಲಿ ಕುಮತಿಗೆ ಹೋಗುವ ರಸ್ತೆಯಲ್ಲಿ ಅಡ್ಡ ರಸ್ತೆ ಇದ್ದು ಅದರ ಪಕ್ಕದಲ್ಲಿ ಕುರಿಶೆಡ್ ಅನ್ನು ಪ್ರತಿವಾದಿಯ ಅಣ್ಣ ಹಾಕಿರುತ್ತಾರೆ.

ಈ ನೋಡುತ್ತಿರುವ ಭಾವ ಚಿತ್ರದಲ್ಲಿ ಇರುವುದು ದಾವ ಸ್ವತ್ತು ಎಂದರೆ ಅಲ್ಲ. ವಾದಿ ಪ್ರತಿವಾದಿ ಮತ್ತು ಆತನ ಒಡಹುಟ್ಟಿದವರು ಹಾಗೂ ಅದರಲ್ಲಿ ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ ಅಲ್ಲೇ ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ.

ವಾದಿ ದಾವ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ, ದಾವ ಸ್ವತ್ತಿಗೂ ಆತನಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಸ್ವತ್ತಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಈಶ್ವರಪ್ಪ ಜಮೀನು, ಉತ್ತರಕ್ಕೆ ಗಂಗಮ್ಮ ಜಮೀನು, ದಕ್ಷಿಣಕ್ಕೆ ಕುಮತಿ ಗ್ರಾಮಕ್ಕೆ ದಾರಿ ಇದೆ. ಅದು ದಾವ ಜಮೀನಿನ ಚೆಕ್ಕು ಬಂದಿ ಅಲ್ಲ ಎಂದರೆ

**ಓ.ಎಸ್. ನಂ. 239/2018**

**ಪಿ.ಡಬ್ಲ್ಯು: 03 (Peddamallayya)**

ಸರಿಯಲ್ಲ.ಸದರಿ ಚೆಕ್ಕು ಬಂದಿಯ ಜಮೀನು ಸರ್ವೆ ನಂಬರ್ 154ಬಿ ರ ಒಟ್ಟು 13.64 ಎಕರೆ ರಲ್ಲಿ ಯಾವ ಭಾಗದಲ್ಲಿ ಬರುತ್ತದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಹೌದು.

ದಾವ ಸ್ವತ್ತಿನಲ್ಲಿ ಎಂದಿಗೂ ಪ್ರತಿವಾದಿಯ ಅಣ್ಣನೇ ಸ್ವಾಧೀನದಲ್ಲಿ ಇದ್ದು, ನನಗೆ ವಾದಿಯ ವಿರುದ್ಧ ರಾಜಕೀಯ ವೈಶ್ಯಮ್ಯದಿಂದ ನಾನು ವಾದಿಯ ಸ್ವಾಧೀನದಲ್ಲಿ ಇದ್ದಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಕ್ತಾಯ.**

**ಮರು ವಿಚಾರಣೆ ಇಲ್ಲ.**

**(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ಕೂಡ್ಲಿಗಿ.**